SRI A.K. ANANTHA KRISHNA : My suggestion is, Government can send out a Circular that no ration shop shall insist upon that all items should be purchased. That is all the question. Can that not be done? ಇದನ್ನು ಸರಕಾರದವರು ಗಮನಿಸಬೇಕು. ಸರಕಾರದ ಸಿಬ್ಬಂದಿಯು ಇರುವುದಾದರೂ ಏತಕ್ಕಾಗಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಅನಂತಕೃಷ್ಣರವರು ಈ ವಿಚಾರವನ್ನು ಬಹಳ ಕಳಕಳಿಯಿಂದ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಇಲಾಖಾ ಅಧಿಕಾರಿಗಳ ಹತ್ತಿರ ಪ್ರಸ್ತಾಪ ಮಾಡಿದ್ದೇನೆ. ಇವೊತ್ತೇ ನಾವು ಸರ್ಕ್ಯೂಲರ್‌ನ್ನು ಇಷ್ಯೂ ಮಾಡಿ ಯಾವುದಾದರೂ ನ್ಯಾಯಬೆಲೆ ಅಂಗಡಿಗಳಲ್ಲಿ ಇಂಥ ವಸ್ತುಗಳನ್ನು ತೆಗೆದುಕೊಂಡರೆ ಮಾತ್ರ ಇಂಥ ವಸ್ತುಗಳನ್ನು ಕೊಡುತ್ತೇವೆ ಎಂದು ಹೇಳುವುದಾದರೆ ಅಂಥ ಅಂಗಡಿಗಳವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕೆ ಸಂಬಂಧಪಟ್ಟ ಸರ್ಕ್ಯೂಲರ್‌ನ್ನು ಇವೊತ್ತೇ ಇಷ್ಯೂ ಮಾಡುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ :- ದಯಮಾಡಿ ಸರ್ಕ್ಯೂಲರ್‌ನ್ನು ಕೂಡಲೇ ಇಷ್ಯೂ ಮಾಡಿ, ಇದನ್ನು ಇಷ್ಯೂ ಮಾಡುವುದಕ್ಕೆ ಸರಕಾರಕ್ಕೆ ಇರುವ ಕಷ್ಟವಾದರೂ ಏನು?

SRI T.N. NARASIMHA MURTHY : – Today before sun–set I am going to issue a circular.

SRI A.K. ANANTHA KRISHNA : – Thank you very much.

ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೇರಿಸುವುದು

1398. ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಹೈಸ್ಕೂಲ್‌ಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ.

ಆ) ಹರಪನಹಳ್ಳಿ ತಾಲ್ಲೂಕಿನಲ್ಲಿ ಬರುವ ಹಲಬಾಗಿಲು ಹಾಗೂ ತೆಲಗಿಯಲ್ಲಿರುವ ಹೈಸ್ಕೂಲನ್ನು ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸುವ ಹೈಸ್ಕೂಲುಗಳು ಖಾಸಗೀಯವರಿಗೆ ವಹಿಸಿ ಕೊಡುವ ಯೋಜನೆ ಏನಾದರೂ ಸರ್ಕಾರದ ಮುಂದೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) –

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಹೈಸ್ಕೂಲುಗಳ ಪೈಕಿ ಕೆಳಕಂಡ 3 ಹೈಸ್ಕೂಲುಗಳನ್ನು ಮೇಲ್ದರ್ಜೆಗೇರಿಸಲು ಮನವಿ ಬಂದಿರುತ್ತದೆ.

1. ಸರ್ಕಾರಿ ಪ್ರೌಢಶಾಲೆ, ಹಲವಾಗಿಲು
2. ಸರ್ಕಾರಿ ಪ್ರೌಢಶಾಲೆ, ಮತ್ತಿಹಳ್ಳಿ
3. ಸರ್ಕಾರಿ ಪ್ರೌಢಶಾಲೆ, ತೆಲಗಿ

ಮೇಲ್ಕಂಡ ಪ್ರೌಢಶಾಲೆಗಳಲ್ಲಿ ತೆಲಗಿ ಪ್ರೌಢಶಾಲೆಯನ್ನು ಸರ್ಕಾರವು ಈಗಾಗಲೇ ಮೇಲ್ದರ್ಜೆಗೇರಿಸಿದೆ.

ಆ) ತೆಲಗಿಯ ಸರ್ಕಾರಿ ಹೈಸ್ಕೂಲನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ 420 ಎಸ್ ಹೆಚ್ ಹೆಚ್. 91 ದಿನಾಂಕ 11.9.91 ರಲ್ಲಿ ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸಿದೆ. ಹಲವಾಗಿಲು ಹೈಸ್ಕೂಲನ್ನು ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಅವಶ್ಯಕತೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ

ಶ್ರೀ ಬಿ.ಹೆಚ್. ಯಂಕಾನಾಯಕ್ :- ಮಾನ್ಯ ಅಧ್ಯಕ್ಷರೇ, ಹರಪನ ಹಳ್ಳಿ ತಾಲ್ಲೂಕು ಇಕ್ಕೇರಿ, ಹಲವಾಗಲು, ತೆಲಗಿ ಮತ್ತಿ ಹಳ್ಳಿಗಳಲ್ಲಿನ ಸರಕಾರಿ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸುತ್ತೇವೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಇದರಲ್ಲಿ ತೆಲಗಿ ಗ್ರಾಮದಲ್ಲಿ ಈಗಾಗಲೇ ಖಾಸಗೀಯವರಿಗೆ ತಾವುಗಳು ಪರವಾನಿಗೆಯನ್ನು ಕೊಟ್ಟಿದ್ದೀರಿ. ಮತ್ತಿಹಳ್ಳಿಯಲ್ಲಿ ಖಾಸಗಿಯವರಿಗೆ ಪರವಾನಿಗೆ ಕೊಟ್ಟಿದ್ದೀರಿ. ಸರಕಾರಿ ಕಾಲೇಜನ್ನು ಬಿಟ್ಟು ಹೀಗೆ ಖಾಸಗಿಯವರಿಗೆ ಪರವಾನಿಗೆಯನ್ನು ಕೊಟ್ಟರೆ ಕಷ್ಟವಾಗುತ್ತದೆ. ಆದ್ದರಿಂದ ಸರಕಾರದ ವತಿಯಿಂದಲೇ ಈ ಪದವಿ ಪೂರ್ವ ಕಾಲೇಜುಗಳನ್ನು ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಖಾಸಗೀಯವರಿಗೆ ಈ ಬಗ್ಗೆ ಅವಕಾಶ ಕೊಡದೇ ಸರಕಾರದವರೇ ಈ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸಿ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೇ, ಸರಕಾರಿ ಪ್ರೌಢಶಾಲೆ, ತೆಲಗಿ, ಇದನ್ನು ನಾವು 11.9.91 ರ ಸರಕಾರಿ ಆದೇಶದ ಪ್ರಕಾರ ಪದವೀಪೂರ್ವ ಕಾಲೇಜಾಗಿ ಮೇಲ್ದರ್ಜೆಗೆ ಏರಿಸಿದ್ದೇವೆ. ಬಹುಶಃ ಈ ವರ್ಷ ಅದು ಪ್ರಾರಂಭವಾಗದಿದ್ದರೆ ಮುಂದಿನ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ. ಸರಕಾರಿ ಹೈಸ್ಕೂಲ್ ಹಲವಾಗಲು ಮತ್ತು ಮತ್ತಿಹಳ್ಳಿ ಈ ಎರಡನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಪ್ರಸ್ತಾವನೆ ಸರಕಾರದಲ್ಲಿದೆ. ಒಂದು ವೇಳೆ ಅದು ಅಲ್ಲಿ ಅಗತ್ಯ ಇದ್ದರೆ ನಾವು 1992–93 ರಲ್ಲಿ ಅದನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸಧ್ಯಕ್ಕೆ ನಮ್ಮಲ್ಲಿರತಕ್ಕಂಥ ಈ ಮೂರು ಸರಕಾರಿ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಪ್ರಸ್ತಾವನೆ ಇದೆ.

ಶ್ರೀ ಬಿ. ಹೆಚ್. ಯಂಕಾನಾಯಕ್ :- ಸರಕಾರದವರು ಪದವಿಪೂರ್ವ ಕಾಲೇಜುಗಳನ್ನು ಮಾಡಿ ನಡೆಸಬೇಕು, ಅದನ್ನು ಬಿಟ್ಟು ಖಾಸಗೀಯವರಿಗೆ ಕೊಟ್ಟರೆ ಅದು ಸರಿಯಲ್ಲ. ಮತ್ತು ಸರಕಾರದ ಪಿಯುಸಿ ಕಾಲೇಜು ಇರುವಾಗ ಖಾಸಗಿಯವರದ್ದು ಇರುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸದಸ್ಯರ ಸಲಹೆಗಳನ್ನು ಗಮನಿಸಲಾಗುವುದು.

ವಿದ್ಯುಚ್ಛಕ್ತಿಯ ಕಳುವಿನ ಪತ್ತೆಗೆ ನೀಡಿದ ಬಹುಮಾನದ ಮೊತ್ತ

1582. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) ಸರ್ಕಾರ ವಿದ್ಯುಚ್ಛಕ್ತಿ ಕಳವು ಮಾಡುವ ಅಪವಾಧ ಹುಡುಕಿಕೊಟ್ಟವರಿಗೆ ನೀಡಿದ ಬಹುಮಾನದ ಮೊತ್ತ ಎಷ್ಟು? ಹಾಗೂ ಅವುಗಳಿಗೆ ಕಾರಣವಾದ ಉದ್ದಿಮೆಗಳು ಯಾವುವು? (ಉದ್ಯಮಗಾರು ಮತ್ತು ವರ್ಷವಾರು ವಿವರ ನೀಡುವುದು ಮೂರು ವರ್ಷಗಳವರೆಗೆ.)

ಆ) ಈ ಬಹುಮಾನ ನೀಡುವ ಕ್ರಮದಿಂದ ವಿದ್ಯುತ್ತಿನ ಕಳುವಿನ ಪ್ರಮಾಣ ಕಡಿಮೆಯಾಗಿರುವುದು ಕಂಡು ಬಂದಿರುವುದೇ ಹಾಗೂ ಇಂದಿನ ಟ್ರಾನ್ಸ್‌ಮಿಷನ್ ನಲ್ಲಿಯ ಅಪವ್ಯಯದ ಪ್ರಮಾಣ ಎಷ್ಟು?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿರುವುದೇ (ವಿವರ ನೀಡುವುದು)

ಈ) ಸರ್ಕಾರದ ಈ ಪುರಸ್ಕಾರ ಬಹುಮಾನ ಪಡೆದ ವ್ಯಕ್ತಿಗಳು ಯಾರು ಯಾರು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) –

ಅ) ವಿದ್ಯುಚ್ಛಕ್ತಿ ಕಳ್ಳತನದ ಅಪರಾಧವನ್ನು ಹುಡುಕಿಕೊಟ್ಟವರಿಗೆ ಬಹುಮಾನ ನೀಡುವ ಪದ್ಧತಿಯನ್ನು 1990–91ರ ಸಾಲಿನಿಂದ ಚಾರಿಗೊಳಿಸಲಾಗಿದೆ. 1990–91 ಮತ್ತು 1991–92 ರ ಸಾಲಿನ (ಜನವರಿ 1992 ರ ಅಂತ್ಯದವರೆಗೆ) ವಿವರಗಳು ಕೆಳಕಂಡಂತಿವೆ.